ಯಾವಾಗ ಪದಗಳೇ ಸಿಗುವುದಿಲ್ಲವೋ ಆಗ ರೇಖೆ ಬಿಡಿಸುವುದು ಉಪಯೋಗಕ್ಕೆ ಬರುತ್ತದೆ. ರೇಖೆಯಿಂದಾಗಿ ನನ್ನ ಪದ ನನಗೆ ಮರಳಿ ಸಿಕ್ಕಿತು.

◆ ಪದಗಳು ರೇಖೆಗಳದ್ದೇ ಒಂದು ಭಾಗ, ಅವು ಪರಸ್ಪರ ಸಹಾಯಕವಾಗುತ್ತವೆ ಎಂದೆನ್ನಬಹುದೇ?




ಪಠ್ಯ ಮತ್ತು ರೇಖಾಚಿತ್ರವು ಒಂದು ಮತ್ತೊಂದನ್ನು ಆಳುತ್ತಿರುತ್ತವೆ. ನಾನು ಹತ್ತು ವರ್ಷಗಳ ಹಿಂದೆ ಕಲ್ಕತ್ತೆಗೆ ಹೋದಾಗ 'ಶೋ ಯುವರ್ ಟಂಗ್' – ಬರೆಯಲು ಶುರು ಮಾಡಿದೆ. ನಾನಲ್ಲಿನ ಪರಿಸ್ಥಿತಿ ಕಂಡು ಕಂಗೆಟ್ಟು ಹೋದೆ. ನಾನಲ್ಲೇ ಇದನ್ನು ಬರೆಯಬೇಕು, ಚಿತ್ರ ಬಿಡಿಸಬೇಕು, ಹಲವು ಸ್ಥಳಗಳಿಗೆ ಭೇಟಿ ನೀಡಬೇಕು ಎಂದೆನಿಸಿತು. ನನ್ನ ಪ್ರವಾಸ ಶುರುವಾಯಿತು. ಏಷ್ಯಾ, ಆಫ್ರಿಕಾ ಖಂಡದ ಹಲವು ದೇಶಗಳಿಗೆ ನಾನು ಭೇಟಿ ನೀಡಿದೆ. ಹಾಂಗ್‌ಕಾಂಗ್, ಮನಿಲಾ, ಜಕಾರ್ತಾದ ಜೋಪಡಪಟ್ಟಿಯನ್ನು ನೋಡಿದೆ. ನನಗೆ ಕಲ್ಕತ್ತೆಯ ನೆನಪಾಯಿತು. ಮೊದಲ ಜಗತ್ತಿನ ಯಾವ ಸಮಸ್ಯೆಗಳು ಮೂರನೇ ಜಗತ್ತಿನಲ್ಲಿ ಹೇಗೆ ಬಹಿರಂಗವಾಗಿ ಸೇರಿಕೊಂಡವು ಎನ್ನುವುದು ಸ್ಪಷ್ಟವಾಗಿ ಅರಿವಿಗೆ ಬಂತು. ಹೀಗಾಗಿ ನಾನು ಕಲ್ಕತ್ತೆಗೆ ಹೋದೆ. ಬರೆಯುವ ಶಕ್ತಿಯನ್ನು ನಾನು ಕಳೆದುಕೊಂಡಿದ್ದೆ. ರೇಖಾಚಿತ್ರದ ಮೂಲಕ ನಾನು ಮರಳಿ ಗದ್ಯಲೇಖನ ಮಾಡುವುದು ಸಾಧ್ಯವಾಯಿತು. ಆನಂತರ ಹನ್ನೆರಡು ಭಾಗಗಳ ದೀರ್ಘ ಕವಿತೆ ಬರೆದೆ. ಅದು ಕಲ್ಕತ್ತಾ ನಗರದ ಕವಿತೆ. ನೀವೊಂದು ವೇಳೆ ಗದ್ಯ, ರೇಖಾಚಿತ್ರ ಮತ್ತು ಕವಿತೆಯನ್ನು ಒಗ್ಗೂಡಿಸಿ ನೋಡಿದರೆ, ಬೇರೆಬೇರೆ ಅರ್ಥದಲ್ಲಿ ಕಲ್ಕತ್ತೆಗೆ ಸಂಬಂಧಿಸಿದ್ದನ್ನು ನೀವು ಕಾಣಬಹುದು. ಅದರ ಕಟ್ಟುವ ಕ್ರಿಯೆ ಬೇರೆಬೇರೆಯಾಗಿದ್ದರೂ ಈ ಮೂರರಲ್ಲೂ ಒಂದು ಬಗೆಯ ಸಂವಾದವೂ ಇದೆ. ಇದರಲ್ಲಿ ಕವಿತೆ ಮಹತ್ವದ್ದು.

◆ ಬರವಣಿಗೆಯು ಒಂದು ಯಾತನಾಮಯ ಕ್ರಿಯೆಯೇ?

ಇದು ಶಿಲ್ಪಾಕೃತಿಯಂತಿರುತ್ತದೆ. ಅದರಲ್ಲಿ ಒಂದಿಷ್ಟು ಸಂಗೀತದ ಅಂಶವೂ ಇರುತ್ತದೆ. ಅದೇ ಬಗೆ ಬರವಣಿಗೆಯಲ್ಲೂ ಇರುತ್ತದೆ. ನಾನು ಎಷ್ಟೋ ದಿನ ಕರಡು ಸಿದ್ಧತೆಯಲ್ಲಿ ತೊಡಗುತ್ತೇನೆ. ಒಮ್ಮೊಮ್ಮೆ ಒಂದು ವಾಕ್ಯವೂ ತೋಚುವುದಿಲ್ಲ. ಕೆಲಸ ಕೆಲಸ, ಸತತ ಕೆಲಸ ಮಾಡುತ್ತಿರುತ್ತೇನೆ. ಮನಸ್ಸಿನ ಮೇಲೆ ಒಂದು ಬಗೆಯ ಒತ್ತಡವೂ ಬಿದ್ದಿರುತ್ತದೆ. ಕೆಲ ಬದಲಾವಣೆಯನ್ನು ಮಾಡುತ್ತೇನೆ. ಅದರಲ್ಲೇ ನಿಜವಾದ ಸಂತೋಷ ಅಡಗಿದೆ.

◆ ನಿಮ್ಮ ಕಾದಂಬರಿ ಅಥವಾ ಕವಿತೆಗಳ ಇಂಗ್ಲಿಷ್ ಅನುವಾದವನ್ನು ಓದುವಾಗ ಮೂಲ ಪಠ್ಯದ ಎಷ್ಟೋ ವಿಷಯಗಳು ಕಳೆದು ಹೋಗಿವೆ ಎಂದೆನಿಸುತ್ತದೆಯೇ?

ನಾನು ಸ್ವತಃ ಇಂಗ್ಲಿಷ್ ಓದುವುದಿಲ್ಲ. ನನ್ನ ಭಾಷಾಂತರವನ್ನು ಓದುವ ಪ್ರಯತ್ನ ಮಾಡುತ್ತೇನೆ.